# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

☎ ೦೮೩೯೪-೨೪೧೩೩೫ ಫ್ಯಾಕ್ಸ್ : ೦೮೩೯೪-೨೪೧೩೩೫

ಇ-ಅಂಚೆ : kannadauniversity@gmail.com


## ತಾತ್ಕಾಲಿಕ ಯೋಜನಾ ಸಹಾಯಕರು ಹಾಗೂ ಡಾಟಾ ಎಂಟ್ರಿ ಆಪರೇಟರ್ ನೇಮಕಾತಿಯ ಪ್ರಕಟಣೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಆವರಣದಲ್ಲಿ ಒನಕೆ ಓಬವ್ವ ಪೀಠದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಯೋಜನಾ ಸಹಾಯಕರು ಹಾಗೂ ಡಾಟಾ ಎಂಟ್ರಿ ಆಪರೇಟರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಉದ್ದೇಶಿಸಿದೆ.

| ಕ್ರ.ಸಂ. | ಹುದ್ದೆಯ ಹೆಸರು | ಸಂಖ್ಯೆ | ಮಾಸಿಕ ವೇತನ | ವಿದ್ಯಾರ್ಹತೆ |
|---|---|---|---|---|
| ೧ | ಯೋಜನಾ ಸಹಾಯಕರು | ೦೨ | ವಿಶ್ವವಿದ್ಯಾಲಯದ ನಿಯಮಾನುಸಾರ | ಎಂ.ಎ. (ಸ್ನಾತಕೋತ್ತರ ಪದವಿ) ಪಿಎಚ್.ಡಿ. (ಕನ್ನಡ) |
| ೨ | ಡಾಟಾ ಎಂಟ್ರಿ ಆಪರೇಟರ್ | ೦೧ | ವಿಶ್ವವಿದ್ಯಾಲಯದ ನಿಯಮಾನುಸಾರ | ಪದವಿ ಜೊತೆಗೆ ಕಂಪ್ಯೂಟರ್ ಜ್ಞಾನ ಅವಶ್ಯಕ |

ಆಸಕ್ತ ಅಭ್ಯರ್ಥಿಗಳು ದಿನಾಂಕ ೩೦.೦೩.೨೦೨೦ ರಂದು ಬೆಳಿಗ್ಗೆ ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಆಡಳಿತಾಂಗ ಕಚೇರಿಯಲ್ಲಿ (ಕ್ರಿಯಾಶಕ್ತಿಯಲ್ಲಿ) ನಡೆಯುವ ವಾಕ್–ಇನ್ (Walk-In Interview) ಸಂದರ್ಶನದಲ್ಲಿ ಭಾಗವಹಿಸಬಹುದು. ಆಸಕ್ತರು ಮೂಲ ಅಂಕಪಟ್ಟಿ ಹಾಗೂ ಅರ್ಹತಾ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು. ಈ ಸಂಬಂಧ ಯಾವುದೇ ದಿನಭತ್ಯೆಗಳನ್ನು ನೀಡಲಾಗುವುದಿಲ್ಲ. ಈ ತಾತ್ಕಾಲಿಕ ಹುದ್ದೆಗಳು ವಿಶ್ವವಿದ್ಯಾಲಯದ (ಈ ಯೋಜನೆ ಮುಗಿಯುವವರೆಗೆ) ಕಾಲಮಿತಿಗೆ ಒಳಪಟ್ಟಿರುತ್ತವೆ. ಸಂದರ್ಶನ ಹಾಗೂ ಆಯ್ಕೆಗೆ ಸಂಬಂಧಿಸಿದ ಅಂತಿಮ ನಿರ್ಣಯ ಕನ್ನಡ ವಿಶ್ವವಿದ್ಯಾಲಯದ್ದೇ ಆಗಿರುತ್ತದೆ.

**ವಿಶೇಷ ಸೂಚನೆ:**

೧. ಈ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿರುತ್ತದೆ.

೨. ಸರ್ಕಾರದ ಯೋಜನೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವವರಿಗೆ ಮೊದಲ ಆದ್ಯತೆ ನೀಡಲಾಗುವುದು.

೩. ಎಲ್ಲಾ ಹಕ್ಕುಗಳನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ. ಹಾಗೂ ಯಾವುದೇ ಕಾರಣವಿಲ್ಲದೆ ತಾತ್ಕಾಲಿಕ ನೇಮಕಾತಿಯನ್ನು ಮುಂದೂಡುವ, ರದ್ದುಗೊಳಿಸುವ ಹಕ್ಕು ವಿಶ್ವವಿದ್ಯಾಲಯಕ್ಕೆ ಇರುತ್ತದೆ.

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : ೧೮.೦೩.೨೦೨೦
ಸ್ಥಳ : ವಿದ್ಯಾರಣ್ಯ